ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	955
ಸದಸ್ಯರ ಹೆಸರು	:	ಶ್ರೀ ಕೆ.ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	20-09-2021
ಉತ್ತರಿಸುವ ಸಚಿವರು	:	ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕಾರವಾರ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಗುಣವಂತೆ ಗ್ರಾಮದ ಫಾರೆಸ್ಟೆ ಸರ್ವ ಸರ್ವೆ ನಂ.275 ಹಾಗೂ 263 ರಲ್ಲಿ ಪೌರೆಸ್ಟೆ ಜಾಗ ಅತಿಕ್ರಮವಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; (ಅತಿಕ್ರಮ ಮಾಡಿದವರ ಹೆಸರು ಹೆಕ್ಟೇರುವಾರು ಮಾಹಿತಿಯನ್ನು ಒದಗಿಸುವುದು)	ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ಅರಣ್ಯ ವಿಭಾಗದ ಹೊನ್ನಾವರ ವಲಯದ ಗುಣವಂತೆ ಗ್ರಾಮ ಅರಣ್ಯ ಸ.ನಂ.275 ಹಾಗೂ 263 ರ ಫಾರೆಸ್ಟ್ ಜಾಗ ಅತಿಕ್ರಮಣವಾಗಿರುವ ಬಗ್ಗೆ ಅರಣ್ಯ ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಗುಣವಂತೆ ಗ್ರಾಮ ಅರಣ್ಯ ಸ.ನಂ.275 ಜಾಗದಲ್ಲಿ ಅತಿಕ್ರಮಣ ಮಾಡಿದವರ ಹೆಸರು ಮತ್ತು ಹೆಕ್ಟೇರುವಾರು ಮಾಹಿತಿಯು ಈ ಕೆಳಗಿನಂತಿರುತ್ತದೆ.

ಕ್ರ. ಸಂ.	ಅತಿಕ್ರಮಣದಾರರ ಹೆಸರು ಮತ್ತು ವಿಳಾಸ	ವಿಸ್ತೀರ್ಣ (ಹೆ.ಗಳಲ್ಲಿ)	ತಕ್ಷೀರು ಸಂಖ್ಯೆ ಮತ್ತು ದಿನಾಂಕ
1	ಮರಕಂಡಿಯಾಲ ಮನಪತ್ತಿ ಸಂತೋಷ. ಗುಣವಂತೆ ಗ್ರಾಮ	0.30	21/2013-14 ದಿನಾಂಕ: 30-12-2013
	ಒಟ್ಟು	0.30	

ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ಅರಣ್ಯ ವಿಭಾಗದ ಹೊನ್ನಾವರ ವಲಯದ ಗುಣವಂತೆ ಗ್ರಾಮ ಅರಣ್ಯ ಸ.ನಂ. 263 ಜಾಗದಲ್ಲಿ ಅತಿಕ್ರಮಣ ಮಾಡಿದವರ ಹೆಸರು ಮತ್ತು ಹೆಕ್ಟೇರ್ ವಾರು ಮಾಹಿತಿಯು ಈ ಕೆಳಗಿನಂತಿರುತ್ತದೆ.'

ಕ್ರ. ಸಂ.	ಅತಿಕ್ರಮಣದಾರರ ಹೆಸರು ಮತ್ತು ವಿಳಾಸ	ವಿಸ್ತೀರ್ಣ (ಹೆ.ಗಳಲ್ಲಿ)	ತಕ್ಷೀರು ಸಂಖ್ಯೆ ಮತ್ತು ದಿನಾಂಕ
1	ಜನಾರ್ಧನ ಮಂಜುನಾಥ ಮೇಸ್ತ. ಗುಣವಂತೆ ಗ್ರಾಮ	1.20	14/1998-99, ದಿ:14.08.1998

		2	ನಾರಾಯಣ ಮಂಜುನಾಥ ಮೇಸ್ತ. ಗುಣವಂತೆ ಗ್ರಾಮ	1.20	15/1998–99, ದಿ:14.08.1998
		3	ಮಂಜುನಾಥ ಈರಪ್ಪ ನಾಯ್ಕ ಗುಣವಂತೆ ಗ್ರಾಮ	1.20	16/1998–99, ದಿ:14.08.1998
		4	ಸಣಕೂಸ ಈರಪ್ಪಾ ನಾಯ್ಕ. ಗುಣವಂತೆ ಗ್ರಾಮ	1.20	17/1998–99, ದಿ:14.08.1998
		5	ತಿಮ್ಮಣ್ಣ ಗೋವಿಂದ ನಾಯ್ಕ. ಗುಣವಂತೆ ಗ್ರಾಮ	0.30	18/1998–99, ದಿ:15.08.1998
		6	ಸಣ್ಣಮ್ಮ ನಾರಾಯಣ ನಾಯ್ಕ ಗುಣವಂತೆ ಗ್ರಾಮ	1.60	19/1998–99, ದಿ:15.08.1998
		7	ತಿಮ್ಮಪ್ಪ ಮಂಜುನಾಥ ನಾಯ್ಕ. ಗುಣವಂತೆ ಗ್ರಾಮ	1.20	20/1998–99, ದಿ:15.08.1998
		8	ಪುಟ್ಟಯ್ಯ ಗಣಪ ನಾಯ್ಕ. ಗುಣವಂತೆ ಗ್ರಾಮ	1.20	21/1998–99, ದಿ:15.08.1998
		9	ತಿಮ್ಮಪ್ಪ ಕೃಷ್ಣಪ್ಪ ನಾಯ್ಕ ಮೃತ ಮಗಳು ಶ್ರೀಮತಿ ಕನ್ನೆ ದೇವಪ್ಪ ನಾಯ್ಕ ಗುಣವಂತೆ ಗ್ರಾಮ	1.20	22/1998–99, ದಿ:15.08.1998
		10	ಮಂಜು ಹಾವಳ್ಳಿ ಗೌಡ. ಗುಣವಂತೆ ಗ್ರಾಮ	0.80	23/1998–99, ದಿ:15.08.1998
		11	ಶಿವಪ್ಪ ತಿಮ್ಮಪ್ಪ ಗೌಡ ಮೃತ ತಿಮ್ಮಣ್ಣ ಶಿವಪ್ಪ ಗೌಡ. ಗುಣವಂತೆ ಗ್ರಾಮ	0.80	24/1998–99, ದಿ:15.08.1998
		12	ಜಟ್ಟಿ ಗೋವಿಂದ ನಾಯ್ಕ. ಗುಣವಂತೆ ಗ್ರಾಮ	01.20	25/1998–99, ದಿ:15.08.1998
		13	ಹನುಮಂತ ಗೋವಿಂದ ನಾಯ್ಕ ಮೃತ ಗೋವಿಂದ ಕೃಷ್ಣ. ಗುಣವಂತೆ ಗ್ರಾಮ	01.20	26/1998–99, ದಿ:15.08.1998

14	ನಾರಾಯಣ ತಿಮ್ಮಪ್ಪ ನಾಯ್ಕ ಗುಣವಂತೆ ಗ್ರಾಮ	0.14	03/2001–02, ದಿ:12.07.2001
15	ವಿಷ್ಣು ತಿಮ್ಮಪ್ಪ ನಾಯ್ಕ, ಗುಣವಂತೆ ಗ್ರಾಮ	0.64	04/2001–02, ದಿ:18.07.2001
16	ಅಣ್ಣಪ್ಪ ಮರಿ ಗೌಡ. ಗುಣವಂತೆ ಗ್ರಾಮ	0.48	05/2001–02, ದಿ:18.07.2001
ಒಟ್ಟು		15.56	
ಅರಣ್ಯ ಸ.ನಂ.275 ರ ಒಟ್ಟು		0.30	
ಅರಣ್ಯ ಸ.ನಂ.263 ರ ಒಟ್ಟು		15.56	
ಒಟ್ಟು		15.86	

ಆ)	ಈ ಅತಿಕ್ರಮವನ್ನು ತಡೆಯಲು ವಿಫಲರಾದ ಕೆಳದಹತದಿಂದ ಮೇಲಿನ ಹಂತದ ಅಧಿಕಾರಿಗಳ ಮೇಲೆ ಕೈಗೊಂಡ ಶಿಸ್ತು ಕ್ರಮವೇನು; ಈ ಸರ್ವೆ ನಂಬರಿನಲ್ಲಿ ಮಾಡಿರುವ ಅತಿಕ್ರಮ ತೆರವುಗೊಳಿಸಿ ಈ ಸ್ಥಳದಲ್ಲಿ ಸುರಕ್ಷ ಬೇಲಿ ಹಾಕಲು ಅರಣ್ಯ ಇಲಾಖೆಗೆ ಇರುವ ತೊಂದರೆಯೇನು; ಈ ಪ್ರದೇಶದಲ್ಲಿ ಅರಣ್ಯ ಇಲಾಖೆಯವರು ಬೆಳೆಸಿರುವ ಗೇರುಹಣ್ಣೆನ್ನು ಹರಾಜು ಮಾಡಲಾಗುತ್ತಿದೆಯೇ? ಇಲ್ಲದಿದ್ದಲ್ಲಿ ಕಾರಣಗಳೇನು?	ಗುಣವಂತೆ ಗ್ರಾಮ ಅರಣ್ಯ ಸ.ನಂ.275 ಹಾಗೂ 263ರ ಅರಣ್ಯ ಜಾಗದಲ್ಲಿರುವ ಅತಿಕ್ರಮಣಗಳು ಹಳೆಯ ಅತಿಕ್ರಮಣವಾಗಿದ್ದು, ಅತಿಕ್ರಮಣದಾರರು ಅರಣ್ಯ ಹಕ್ಕು ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಪರಿಶೀಲನಾ ಹಂತದಲ್ಲಿರುತ್ತದೆ. ಹೊಸದಾಗಿ ಯಾವುದೇ ಅತಿಕ್ರಮಣ ಮಾಡಿದ್ದಾಗಲೀ ಅಥವಾ ವಿಸ್ತರಿಸಿರುವುದಾಗಲೀ ಇರುವುದಿಲ್ಲ. ಗುಣವಂತೆ ಗ್ರಾಮ ಅರಣ್ಯ ಸ.ನಂ.263 ರಲ್ಲಿ ಈ ಮೇಲೆ ನಮೂದಿಸಿದ ಅತಿಕ್ರಮಣದಾರರ ಪೈಕಿ ನಾರಾಯಣ ತಿಮ್ಮಪ್ಪ ನಾಯ್ಕ ಗುಣವಂತೆ ಗ್ರಾಮ ಅತಿಕ್ರಮಣವನ್ನು ವಿಸ್ತರಿಸಲು ಮುಂದಾದಾಗ ಅದನ್ನು ತಡೆದು ತೆರವುಗೊಳಿಸಿ ಸೂಕ್ತ ಕಾನೂನು ಕ್ರಮ ಜರುಗಿಸಿರುವುದರಿಂದ ಸಿಬ್ಬಂದಿಗಳ ಮೇಲೆ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಸದರಿ ಒತ್ತುವರಿದಾರರ ವಿರುದ್ಧ ಕರ್ನಾಟಕ ಅರಣ್ಯ ಕಾಯ್ದೆ 1963 ರಂತೆ ಕಲಂ 64(ಎ) ರಂತೆ ಒತ್ತುವರಿಯನ್ನು ತೆರವುಗೊಳಿಸಲು ಪ್ರಕ್ರಿಯೆ ನಡೆಸಲಾಗುತ್ತಿದೆ. ಸದರಿ ಪ್ರದೇಶದಲ್ಲಿ ಅರಣ್ಯ ಇಲಾಖೆಯಿಂದ ಯಾವುದೇ ಗೇರು ನೆಡುತೋಪು ನಿರ್ಮಾಣ ಮಾಡಿ ನಿರ್ವಹಿಸಿರುವುದು ಇರುವುದಿಲ್ಲ.

ಸಂಖ್ಯೆ: ಅಪಜೀ 48 ಎಫ್‌ಜಿಎಲ್ 2021

(ಉಮೇಶ್ ವಿ. ಕತ್ತಿ)
ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.